ಕನ್ನಡತಿ ಕನ್ನಡ, ಬೆಂಗಳೂರು
*ಹೆಣ್ಣು ಬಾಳಿನ ಕಣ್ಣು. ಗಂಡು?*



ಆ ಕಣ್ಣಿಗೆ ತಂಪು ನೀಡಬೇಕಾದ ಕೂಲಿಂಗ್ ಗ್ಲಾಸ್.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
*'ಬಂಧುಗಳು ಎನಗಿಲ್ಲ, ಬದುಕಿನಲಿ ಸುಖವಿಲ್ಲ' ಎಂದು ಹಲುಬುವವರಿಗೆ ನಿಮ್ಮ ಸಲಹೆ?*
ದಸರಾ ಸಮಯದಲ್ಲಿ ಮೈಸೂರಿನಲ್ಲಿ ಮನೆ ಮಾಡಿ; ಬಂಧುಗಳು ನೀಡುವ ಸುಖ ಅರಿತು ಹಲುಬುವಿಕೆ ನಿಲ್ಲುವುದು ನಿಶ್ಚಿತ.

ಅಜಯ್, ಬೆಂಗಳೂರು
*ಭರತವಾಕ್ಯವೇ ಏಕೆ? ರಾಮವಾಕ್ಯ ಏಕಿಲ್ಲ?*
ರಾಮ 'ಆಳು' ಎಂದ; ಭರತ 'ನೀ ಆಳದಿದ್ದರೆ ನಿನ್ನ ಪಾದುಕೆಗಳೇ ಆಳ್ಬೇಕ್' ಎಂದ. ಅಂತಿಮವಾಕ್ಯ ಭರತವಾಕ್ಯವೇ.

ದಿನೇಶ್, ಗುಡ್ಡದೂರು
*ಮದ್ಯಕ್ಕೂ, ಮಧ್ಯಾಹ್ನಕ್ಕೂ ಇರುವ ವ್ಯತ್ಯಾಸವೇನು ರಾಮ್?*
ಮಧ್ಯಾಹ್ನ ಹೊರಗಿನಿಂದ ಶಾಖ ಏರಿಸುತ್ತದೆ; ಮದ್ಯ ಒಳಗಿನಿಂದ...

ಪಿ.ಜಿ. ರಾಜ್, ಶಿವಮೊಗ್ಗ
*ಅತಿ ವೇಗ ತಿಥಿ ಬೇಗ; ಅತಿ ಪ್ರೀತಿ?*



ಪುಟ್ಟ ಅತಿಥಿ ಬೇಗ!

ಅನಂತಪದ್ಮನಾಭ ಹೆಚ್.ಎಂ., ಮೈಸೂರು
*ಮಾತು, ಕೃತಿಗಳಲ್ಲಿ ಬರೀ ತಪ್ಪನ್ನು ಹುಡುಕುವವರಿಗೆ ಏನೆಂದು ಹೇಳುವುದು?*
ಪ್ರೂಫ್ ರೀಡರ್ ಅಥವಾ ನ್ಯೂಸ್ ಎಡಿಟರ್!

ರವಿ ಎಂ. ಪೈ, ಹೊನ್ನಾವರ
*ನಮ್ಮ ಕನಸಿನ ಭಾರತ ಹೇಗಿರಬೇಕು?*
ಜಾಗೃತವಾಗಿ.

ಭಾರತಿ ಮಾನಗೆ, ಹೊನ್ನಾವರ
*ಬ್ರಿಟಿಷರು ಭಾರತಕ್ಕೆ ಬಾರದಿದ್ದರೆ ಏನಾಗುತ್ತಿತ್ತು?*
ಕನ್ನಡ ಕಂಗ್ಲಿಷ್ ಆಗುವುದು ತಪ್ಪುತ್ತಿತ್ತು.

ಫಾಲನೇತ್ರ ಸಜ್ಜನ, ಶಿರಸಿ
*ನಾಗಕನ್ನಿಕೆ ಇರುವಂತೆ ಗರುಡ ಕುಮಾರ ಇರುವನೇ?*
ಇರುವನು; ಗರುಡ ಮಾಲ್‌ನಲ್ಲೇ ಇಡೀ ದಿನ ಕಳೆಯುವ ಸಿರಿವಂತನ ಮಗ!

ಪ್ರೊ. ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ
*ದೇವರ ಎದುರೇ ದೇವಸ್ಥಾನ ನಡೆಸುವವರೇ ಸುಳ್ಳು, ಮೋಸ, ವಂಚನೆ ಮಾಡುತ್ತಿದ್ದಾರಲ್ಲಾ....?*
ದೇವನ ಬಳಿ ಬೇಗ ತೆರಳುವ ಆತುರ; ದೇವ ಭಕ್ತನಿಗೆ 7 ಜನ್ಮ, ಶತ್ರುವಿಗೆ 3 ಜನ್ಮ ಕೊಡುವನೆಂಬ ದಾಖಲೆಯಿದೆಯಲ್ಲ!

ಕೆ.ಪಿ. ಸುಜ್ಞಾನಾಚಾರಿ, ಕಲಿಕೆರೆ
*ನಾನು ಶುದ್ಧ ಮನುಷ್ಯನಾಗಬೇಕಾದರೆ ಏನನ್ನು ಮಾಡಬೇಕು, ಏನನ್ನು ಮಾಡಬಾರದು?*
ಸಲಾಂ ಹೊಡೆಯುವ ಗುಲಾಮ್ ಆಗದೆ ಕಲಂ ಹಿಡಿದು ಕಲಾಂ ಆಗಬೇಕು.

ಪಿ.ಜೆ. ರಾಘವೇಂದ್ರ, ಮೈಸೂರು
*ರಾಜಕಾರಣಿಗಳ ಮಕ್ಕಳ ವಿರುದ್ಧ ರೌಡಿ ಶೀಟ್ ತೆರೆಯಲು ಪೊಲೀಸರು ಹಿಂಜರಿಯುವುದೇಕೆ?*
ಆ ಮಕ್ಕಳ ಅಪ್ಪಂದಿರ ಪ್ರಭಾವದಿಂದ ಆ ಶೀಟ್‌ಗಳು ಸ್ಪ್ರಿಂಗ್ ಡೋರ್‌ನಂತೆ ತೆರೆದಷ್ಟೇ ವೇಗವಾಗಿ ಮುಚ್ಚಲ್ಪಡುವುದರಿಂದ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
*ಹೆಂಡತಿಯ ಮಾತನ್ನು ಯಾವ ಸಮಯದಲ್ಲಿ ಕೇಳಬಾರದು?*
ಏನೇ ಬಂದರೂ ಎದುರಿಸುತ್ತೇನೆಂಬ ಹುಚ್ಚು ಹಿಡಿದ ಸಮಯದಲ್ಲಿ!

ಎಂ.ಎ. ಕುಮಾರ್, ಬೆಂಗಳೂರು
*ಗರ್ಭಗುಡಿಯಲ್ಲಿ ಪೂಜೆ ಮಾಡುವ ಪೂಜಾರಿಗಳಿಗೆ ಬೇಕಾಗಿರುವ ಪ್ರಮುಖವಾದ ಅರ್ಹತೆಗಳೇನು?*
ಎಂಜಲು ಹಾರದಂತೆ ಮಂತ್ರಗಳ ಉಚ್ಚಾರ ಮಾಡುವುದು.

## ಬಹುಮಾನಿತ ಪ್ರಶ್ನೆ

ದ್ವಾರಕಾನಾಥ್, ಬೆಂಗಳೂರು
*ಪತಿ ಸತಿಗೆ ಹೆದರುತ್ತಾನೆ. ಸತಿ ಜಿರಳೆಗೆ ಹೆದರುತ್ತಾಳೆ. ಪತಿ ಜಿರಳೆಗೆ ಹೆದರದೆ ಹಿಡಿದೆಸೆಯುತ್ತಾನೆ. ಇವರಲ್ಲಿ ಧೈರ್ಯಶಾಲಿ ಯಾರು?*
ಸತಿಪತಿ ಇಬ್ಬರತ್ತಲೂ ಮೀಸೆ ಕುಣಿಸುವ ಜಿರಳೆ.

ಡಾ.ಹೊ.ಶ್ರೀ. ಮದನಕೇಸರಿ
*ಕುರಿ ಕೊಬ್ಬಿದರೆ ಕುರುಬನಿಗೆ ಲಾಭ. ಕುರುಬನೇ ಕೊಬ್ಬಿದರೆ?*
ಕೊಬ್ಬಿಳಿಸುತ್ತೇವೆನ್ನುತ್ತಾ ದೇಹಕ್ಕಿಂತ ಪರ್ಸಿನ ತೂಕ ಇಳಿಸುವ ಮಂದಿಗೆ ಲಾಭ.

ತಲಕಾಡು ಶ್ರೀನಿಧಿ, ಬೆಂಗಳೂರು
*ಚಂದ್ರನಿಗೂ, ಪ್ರೇಮಿಗಳಿಗೂ ಎಂಥ ನಂಟು ಗುರುಗಳೇ?*
ಪಥ ಸಾದೃಶ್ಯ! ಇಬ್ಬರದೂ ತುಂಬಿಬಂದಾಗ ಹುಣ್ಣಿಮೆ; ಆಗಾಗ್ಗೆ ಕಾರ್ಮೋಡದ ಛಾಯೆ; ಕೈಕೊಟ್ಟಾಗ ಅಮಾವಾಸ್ಯೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಬಾಯಿ ಬಾಯಿ ಸೇರಿದರೆ ಮಾತು; ಕೈ ಕೈ ಸೇರಿದರೆ ಚಪ್ಪಾಳೆ. ಮಂತ್ರಿ ಮಂತ್ರಿ ಸೇರಿದರೆ?*



ದೇಶದ ಭವಿಷ್ಯವೇ ಅಪ್ಪಾಳೆ ತಿಪ್ಪಾಳೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಮಾನವನ ಕಟ್ಟಕಡೆಯ ಆಟ ಯಾವುದು?*
ಉಸಿರಾಟ; ಮೊದಲನೆಯದೂ ಅದೇ.

ಪ್ರಶಾಂತ ಮಯ್ಯ, ಸಾಗರ
*ಅಶ್ಲೀಲ ಚಿತ್ರಗಳನ್ನು ನೀಲಿ ಚಿತ್ರಗಳು ಎಂದು ಏಕೆ ಕರೆಯುತ್ತಾರೆ?*
ನೋಡುವವರು ನರ ನೀಲಿಯಾಗುವಷ್ಟರ ಮಟ್ಟಿಗೆ ಉಸಿರು ಬಿಗಿಹಿಡಿದು ನೋಡುವುದರಿಂದ.

■ ರಾಮ್